ಗೊತ್ತಾಗುವಷ್ಟರಲ್ಲಿ ಒಬ್ಬ ರಿಪೇರಿ ಮಾಡುವಂತೆ ನಟಿಸುತ್ತಿದ್ದಾಗಲೆ ಇನ್ನಿಬ್ಬರು ಬಂದು ನಿಮ್ಮ ಮಗಳನ್ನು ಹಿಡಿದುಕೊಂಡು ಗಿಡಗಳಿದ್ದ ಕಡೆಗೆ ಎಳೆದುಕೊಂಡು ಹೋಗಿದ್ದಾರೆ. ಅಷ್ಟರಲ್ಲಿ ಅದೇ ದಾರಿಯಲ್ಲಿ ಒಂದು ಕಾರು ಬಂದು ರೌಡಿಗಳು ನಿಮ್ಮ ಮಗಳನ್ನ ಅಲ್ಲೆ ತಳ್ಳಿ ಗಾಡಿಯಲ್ಲಿ ಕುಳಿತುಕೊಂಡು ಹೊರಟು ಹೋಗಿದ್ದಾರೆ. ಕಾರಿನಲಿದ್ದವರು ಪೊಲೀಸ್ ಠಾಣೆಗೆ ನಿಮ್ಮ ಮಗಳನ್ನ ಕರೆದುಕೊಂಡು ಬಂದಿದ್ದಾರೆ' ಎಂದರು. ನಮಗೆ ಏನು ಮಾತನಾಡಬೇಕೆಂದು ತೋಚಲಿಲ್ಲ. ಪಕ್ಕದಲ್ಲಿ ಕುಳಿತಿದ್ದ ವೈದ್ಯರು, 'ಸದ್ಯ ಪ್ರಾಣಕ್ಕೆ ಏನೂ ಅಪಾಯ ಇಲ್ಲ. ಆದರೂ ಎರಡು ದಿನ ಆಸ್ಪತ್ರೆಯಲ್ಲೇ ಇರುವುದು ಒಳ್ಳೇದು' ಎಂದರು.

ಸಬ್ ಇನ್ಸ್‌ಪೆಕ್ಟರ್ 'ಈಗ ನಾವು ಏನು ಮಾಡುವುದು ಹೇಳಿ? ಇದೆಲ್ಲ ಈ ಟಿವಿ ಚಾನೆಲ್‌ಗಳಿಗೆ ಗೊತ್ತಾದರೆ ಮಾನ ಮರ್ಯಾದೆ ಎಲ್ಲ ಕಳೆದು ಬಿಡ್ತಾರೆ. ನಿಮ್ಮದು ಒಳ್ಳೆ ಮರ್ಯಾದಸ್ತರ ಕುಟುಂಬ ಬೇರೆ' ಎಂದರು. ನನ್ನ ಮಾವ, ಸಬ್ ಇನ್ಸ್‌ಪೆಕ್ಟರ್ ಕಡೆಗೆ ನೋಡುತ್ತ, 'ಈ ಕೇಸನ್ನು ಯಾರಿಗೂ ತಿಳಿಯದಂತೆ ಇಲ್ಲಿಗೆ ಮುಗಿಸಿದರೆ ಹೇಗೆ? ಇದರ ಬಗ್ಗೆ ನಿಮ್ಮ ಸಲಹೆ ಬೇಕಾಗಿದೆ ಇನ್ಸ್‌ಪೆಕ್ಟರ್?' ಎಂದರು. 'ಸರ್. ನಾವು ಕೇಸನ್ನು ಮುಗಿಸುವುದಕ್ಕೆ ಆಗುವುದಿಲ್ಲ. ಯಾಕೆಂದರೆ ಈಗಾಗಲೇ ನಮಗೆ ಗೊತ್ತಾಗಿ ಆಸ್ಪತ್ರೆಯಲ್ಲೂ ದಾಖಲಾಗಿದೆ. ನಾವು ಅಪರಾಧಿಗಳು ಯಾರು ಅಂತ ಕಂಡು ಹಿಡಿಯುವುದಕ್ಕೆ ರಹಸ್ಯವಾಗಿ ಪ್ರಯತ್ನ ಮಾಡ್ತೀವಿ. ಆದರೆ ನಿಮ್ಮ ಮೊಮ್ಮಗಳು ನಮಗೆ ಸಹಕಾರ ನೀಡಬೇಕು. ನನ್ನ ಕೈಯಲ್ಲಿ ಆಗುವುದೇನೆಂದರೆ ಈ ಕೇಸನ್ನು ಈ ಪತ್ರಿಕೆ, ಟಿವಿ ಚಾನೆಲ್‌ಗಳಿಗೆ ಆದಷ್ಟು ಗೊತ್ತಾಗದಂತೆ ನೋಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬಹುದು. ಈ ಪತ್ರಿಕೆಗಳು, ಕೊಳಚೆ ನ್ಯೂಸ್ ಚಾನೆಲ್‌ಗಳು ಸಾರ್ವಜನಿಕರ ಬದುಕನ್ನು ಬೀದಿ ಪಾಲು ಮಾಡುತ್ತಿರುವುದು ನೆನೆಸಿಕೊಂಡರೆ ಗಾಬರಿಯಾಗುತ್ತೆ. ಜನರ ಬಡತನ, ಹಸಿವು, ನೀರಿನ ಸಮಸ್ಯೆ ಇವುಗಳ ಬಗ್ಗೆ ಯಾವ ಸುದ್ದಿಯನ್ನು ಮಾಡುವುದಿಲ್ಲ. ಇಂತಹ ಕೇಸ್‌ಗಳು ಸಿಕ್ಕಿದರೆ ಸಾಕು. ಇಡೀ ದಿನ ಹೇಳಿದ್ದನ್ನೇ ಹೇಳ್ತಾ ಇರ್ತಾರೆ' ಎಂದರು.

ವೈದ್ಯರ ಕೋಣೆಯಿಂದ ಹೊರಕ್ಕೆ ಬಂದಾಗ ಬೆಳಗಿನ ಜಾವ ನಾಲ್ಕು ಗಂಟೆ. ನಾವು, ವೈದ್ಯರು ಮತ್ತು ಸಬ್ ಇನ್ಸ್‌ಪೆಕ್ಟರ್ ಅವರಿಗೆ ಧನ್ಯವಾದಗಳನ್ನು ತಿಳಿಸಿದೆವು. ಸಬ್ ಇನ್ಸ್‌ಪೆಕ್ಟರ್ ತಮ್ಮ ಜೊತೆಗೆ ಬಂದಿದ್ದ ಪೊಲೀಸ್ ಪೇದೆಯ ಜೊತೆಗೆ ಆಸ್ಪತ್ರೆಯಿಂದ ಹೊರಗೆ ಬಂದಿದ್ದೇ ತಡ. ಇಬ್ಬರು ಟಿವಿ ನ್ಯೂಸ್ ಚಾನೆಲ್‌ನವರು ಹ್ಯಾಂಡ್ ಮೈಕ್‌ಗಳನ್ನು ಕೈಗಳಲ್ಲಿ ಹಿಡಿದುಕೊಂಡು ಅಡ್ಡ ನಿಂತುಕೊಂಡರು. ನಾನು, ಮಾವ ವಿಧಿಯಿಲ್ಲದೆ ಮರೆಯಲ್ಲಿ ನಿಂತುಕೊಳ್ಳಲು ಪ್ರಯತ್ನಿಸಿದೆವು. 'ಯಾರೋ ಕಾಲೇಜು ಹುಡುಗಿಯ ರೇಪ್ ಆಗಿದೆಯಂತೆ? ಮೂವರು ರೌಡಿಗಳು ಹುಡುಗಿಯನ್ನು ರೇಪ್ ಮಾಡಿದ್ದಾರಂತೆ? ಹುಡುಗಿ ಯಾರು? ಅಷ್ಟು ರಾತ್ರಿಯಲ್ಲಿ ಆ ಹುಡುಗಿ ರಸ್ತೆಯೆಲ್ಲಿ ಏಕೆ ಓಡಾಡುತ್ತಿದ್ದಳು? ಅವರ ತಂದೆ ತಾಯಿಯ ಹೆಸರೇನು? ಹುಡುಗಿಯ ಹೆಸರೇನು?' ಹೀಗೆ ಒಬ್ಬರು ಬಿಟ್ಟರೆ ಒಬ್ಬರು ಪ್ರಶ್ನೆಗಳನ್ನು ಕೇಳುತ್ತಿದ್ದರು. ನನಗೆ ಮೈಯೆಲ್ಲ ಬೆವೆತು ಹೋಯಿತು. ನಾವಿಬ್ಬರು ಆಸ್ಪತ್ರೆಯ ಒಳಕ್ಕೆ ಹೋಗಿ ಸ್ವಲ್ಪ ಹೊತ್ತು ಅಡಗಿಕೊಂಡೆವು. ಸಬ್ ಇನ್ಸ್‌ಪೆಕ್ಟರ್ ಹೇಗೊ ಅಲ್ಲಿಂದ ತಪ್ಪಿಸಿಕೊಂಡು ಹೋಗಿದ್ದರು. ಆದರೆ ಮುಖ್ಯ ವೈದ್ಯರ ಕೋಣೆಗೆ ಟಿವಿ ವರದಿಗಾರರು ಈಗ ಲಗ್ಗೆ ಹಾಕುತ್ತಿದ್ದರು.

ನಾವು ನಮ್ಮ ದುರಾದೃಷ್ಟವನ್ನು ನೆನೆದುಕೊಳ್ಳುತ್ತ ಆಸ್ಪತ್ರೆಯ ಹಿಂದಿನ ಬಾಗಿಲಿಗೆ ಬಂದು ನಿಂತುಕೊಂಡೆವು. ತೇಜಸ್ ನನ್ನನ್ನು ಹುಡುಕಿಕೊಂಡು ಬಂದ. `ತೇಜಸ್, ನಿಮ್ಮಮ್ಮ ಎಲ್ಲಿದ್ದಾರೆ? ಎಂದೆ. ಅವನಿಗೂ ಏನೂ ಹೇಳಬೇಕೊ ಅರ್ಥವಾಗದೆ ತಳಮಳಿಸುತ್ತಿದ್ದಂತೆ ತೋರುತ್ತಿದ್ದ. ಹಿಂದಿನ ಬಾಗಿಲಿಂದ ನಾವು ಮೂವರು ಆಸ್ಪತ್ರೆಯ ಒಳಗಡೆಯಿಂದ ದಮಯಂತಿ ಇದ್ದ ಕೋಣೆಗೆ ಹೋದೆವು. ಸಾವಿತ್ರಿ ತಿಂಗಳುಗಟ್ಟಲೆ ಬೆಳಕು ನೋಡದ ಜಿರಳೆಯಂತೆ ಆಗಲೆ ಬಿಳಿಚಿಕೊಂಡಿದ್ದಳು. ಅತ್ತೂ ಅತ್ತು ಕಣ್ಣೀರು ಒರೆಸಿಕೊಳ್ಳುವುದನ್ನು ಮರೆತಿರುವಂತೆ ತೋರುತ್ತಿತ್ತು. ಈಗ ಯಾರೂ ಮಾತನಾಡದೇ ಸುಮಾರು ಹೊತ್ತು ಹಾಗೇ ಅಲ್ಲೇ ದಮಯಂತಿಯ ಹತ್ತಿರ ಕುಳಿತುಕೊಂಡಿದ್ದೆವು. ದಮಯಂತಿ ನಾಲ್ಕಾರು ಹುಲಿಗಳಿಂದ ಗಾಯಗೊಂಡು ಹೇಗೊ ತಪ್ಪಿಸಿಕೊಂಡು ಬಂದು ಇಲ್ಲಿ ಬಿದ್ದಿರುವ ಹುಲ್ಲೆಯಂತೆ ಕಾಣಿಸುತ್ತಿದ್ದಳು. ಸಾವಿತ್ರಿಯನ್ನು ಹೇಗೆ ಸಮಾಧಾನ ಪಡಿಸುವುದು ಎಂಬ ಆತಂಕ ನನ್ನನ್ನ ಮಿತಿ ಮೀರಿ ಕಾಡುತ್ತಿತ್ತು. ದಮಯಂತಿ ಈ ಆಘಾತದಿಂದ ಚೇತರಿಸಿಕೊಳ್ಳಲು ಎಷ್ಟು ದಿನಗಳಾಗಬಹುದೊ ಏನೊ? ಓ ದೇವರೆ! ನನ್ನ ಕುಟುಂಬಕ್ಕೆ ಒಂದೇ ದಿನದಲ್ಲಿ ಎಂತಹ ತೊಂದರೆ ಕೊಟ್ಟುಬಿಟ್ಟೆ? ಸೀತೆ ಭೂಮಿ ಬೇಡಿಕೊಂಡಾಗ ಭೂಮಿ ತಾಯಿಯೆ ಬಿರಿದು ಸೀತೆಯನ್ನು ತನ್ನ ಒಡಲಿಗೆ ಸೇರಿಸಿಕೊಂಡ ಚಿತ್ರ ನನ್ನ ಕಣ್ಣುಗಳ ಮುಂದೆ ಕಾಣಿಸುತ್ತಿತ್ತು.

ಸಾವಿತ್ರಿ, ಇದ್ದಕ್ಕಿದ್ದ ಹಾಗೆ `ಅಪ್ಪ ನನ್ನ ಮಗಳನ್ನ ನೋಡಪ್ಪ. ದೇವರು ಯಾಕೆ ಈ ರೀತಿ ಮಾಡಿಬಿಟ್ಟ? ಅವಳು ಯಾರಿಗೆ ಏನು ಮಾಡಿದಳು? ರೀ, ಅಲ್ಲಿ ನೋಡ್ರಿ ಅವಳ್ನ ಹೇಗೆ ಮಲಗಿದ್ದಾಳೆ? ಅವಳು ಯಾವುತ್ತೂ ಯಾರಿಗೂ ಎಂತಹ ಪರಿಸ್ಥಿತಿಯಲ್ಲೂ ಭಯ ಪಡ್ತಾ ಇರಲಿಲ್ಲ. ಈಗ ನೋಡಿ ಹೇಗೆ ಹೆದರಿಕೊಂಡು ಮಲಗಿದ್ದಾಳೆ'. ಸಾವಿತ್ರಿ ಹೀಗೆ ಏನೇನೊ ಹೇಳುತ್ತಾ ಅಳುತ್ತಿದ್ದಳು. ತೇಜಸ್ ಮತ್ತು ಪ್ರೊ.ಗುರುನಾಥ್ ಅವರ ಕಣ್ಣಲ್ಲೂ ಧಾರಾಕಾರವಾಗಿ ಕಣ್ಣೀರು ಬರುತ್ತಿತ್ತು. ಜೊತೆಗೆ ಶಾರದಾ ಮ್ಯಾಡಮ್ ಅವರು ಮಾತನಾಡುವುದನ್ನೇ ಮರೆತು ಬಿಟ್ಟಿದ್ದರು. ದಮಯಂತಿ ಎಲ್ಲವನ್ನೂ ಕೇಳಿಸಿಕೊಳ್ಳುತ್ತ ಸುಮ್ಮನೆ ಮಲಗಿದ್ದಳು. ಅವಳ ಮನಸ್ಸಿನಲ್ಲಿ ಎಂತಹ ವೇದನೆಯಾಗಿತ್ತೋ ಏನೋ? ಆ ರೌಡಿಗಳು ಹೇಗೆಲ್ಲ ನಡೆದುಕೊಂಡರೊ ಏನೊ? ನನ್ನ ಮನಸ್ಸು ಬಹಳ ಸಂಕಟ ಪಡುತ್ತಿತ್ತು. ಸಾವಿತ್ರಿ ಮತ್ತು ಅವಳ ತಾಯಿಯ ಮುಖಗಳನ್ನು ನೋಡಲಾಗದೆ ಕೋಣೆಯಿಂದ ಹೊರಕ್ಕೆ ಬಂದು ನಿಂತುಕೊಂಡೆ. ಈಗ ಸೂರ್ಯ ಎಂದಿನಂತೆ ಭೂಮಿಯ ಮೇಲೆ ಬೆಳಕು ಚೆಲ್ಲಿದ್ದರೂ ನಮಗೆ ಮಾತ್ರ ಈ ದಿನ ಕರಾಳ ದಿನವಾಗಿತ್ತು.

ಹೊರಕ್ಕೆ ಬಂದ ಮಾವ, 'ಕೃಷ್ಣ. ಸ್ವಲ್ಪ ಸಮಾಧಾನ ಮಾಡಿಕೊಳ್ಳಪ್ಪ' ಎಂದು ನನ್ನ ಭುಜದ ಮೇಲೆ ತಟ್ಟುತ್ತ, ನಾವು ಈಗ ಏನು ಮಾಡೋಣ ಹೇಳು. ವೈದ್ಯರಿಗೆ ಹೇಳಿ ದಮಯಂತೀನ ಮನೆಗೆ ಕರೆದುಕೊಂಡು ಹೋಗುವುದು ಒಳ್ಳೇದು. ಅವಳು ಇಲ್ಲಿ ಇರೋದು ಬೇಡ. ಅದೇನು ಚಿಕಿತ್ಸೆನೊ ವೈದ್ಯರನ್ನ ಮನೆಗೆ ಕರೆಸಿ ಮನೆಯಲ್ಲೇ ಕೊಡೋಣ' ಎಂದರು. 'ದಮಯಂತೀನ ನೀವೇ ಮಾತನಾಡಿಸಿ ನೋಡಿ. ಅವಳು ಸರಿ ಅಂದರೆ ಕರೆದುಕೊಂಡು ಹೋಗೋಣ. ಯಾವುದಕ್ಕೂ ಡಾಕ್ಟರ್ ಒಪ್ಪಿಕೊಳ್ಳಬೇಕಲ್ಲ?' ಎಂದೆ. ಇಬ್ಬರೂ ಅಲ್ಲಿಂದ ಮುಖ್ಯ ವೈದ್ಯರ ಕೋಣೆಗೆ ಹೋಗಿ ನೋಡಿದರೆ, ಡಾಕ್ಟರ್ ತಮ್ಮ ಶಿಫ್ಟ್ ಮುಗಿಸಿಕೊಂಡು ಮನೆಗೆ ಹೋಗಿರುವುದಾಗಿ ಮತ್ತೆ ಅವರು ಬರುವುದು ಸಾಯಂಕಾಲ ನಾಲ್ಕು ಗಂಟೆಗೆ ಎಂದು ಗೊತ್ತಾಯಿತು. ನಾವು ದಮಯಂತಿ ಇದ್ದ ಕೋಣೆಗೆ ಹೋಗಿ ಸ್ವಲ್ಪ ಹೊತ್ತು ಕಾದ ಮೇಲೆ ಆ ವೈದ್ಯರು ಇನ್ನೊಬ್ಬ ಮಹಿಳೆ ವೈದ್ಯರನ್ನು ಕರೆದುಕೊಂಡು ಬಂದು ನನ್ನನ್ನು ಹೊರಗಿರುವಂತೆ ಹೇಳಿದರು.

ಹೊರಗೆ ಬಂದಿದ್ದೆ ಇನ್ನಿಬ್ಬರು ಟಿವಿ ವರದಿಗಾರರು ಹ್ಯಾಂಡ್ ಮೈಕ್‌ಗಳನ್ನು ಹಿಡಿದುಕೊಂಡು ನನಗೆ ಅನೇಕ ಪ್ರಶ್ನೆಗಳನ್ನು ಕೇಳತೊಡಗಿದರು. `ನಿಮ್ಮ ಮಗಳಿಗೆ ಏನಾಯಿತು? ಈಗ ಹೇಗಿದ್ದಾರೆ? ಆ ರೌಡಿಗಳು ಯಾರು? ನಿಮ್ಮ ಮಗಳನ್ನು ನಾವು ನೋಡಬಹುದೆ? ಒಂದೇ ಒಂದು ಸಲ ಆ ಕೋಣೆಗೆ ಬಿಡಿ ಅವರನ್ನು ಮಾತನಾಡಿಸಿ ಹೊರಟು ಹೋಗುತ್ತೇವೆ. ನಿಮಗೆ ಯಾರ ಮೇಲಾದರು ಅನುಮಾನ ಇದೆಯೆ?' ಇತ್ಯಾದಿ? ಹಲವಾರು ಪ್ರಶ್ನೆಗಳನ್ನು ಅವರು ಕೇಳುತ್ತಿದ್ದಂತೆ, ದಮಯಂತಿ ಒಬ್ಬ ಹುಡುಗನ ಕೆನ್ನೆಗೆ ಹೊಡೆದ ವಿಷಯ ಜ್ಞಾಪಕಕ್ಕೆ ಬಂದಿತು. ಈಗ ಬೇರೆ ದಾರಿ ಇಲ್ಲದೆ, `ನೋಡಿ ದಯವಿಟ್ಟು ಯಾರಿಗೂ ಏನೂ ಆಗಿಲ್ಲ. ನನ್ನ ಮಗ್ಳು ರಾತ್ರಿ ಮನೆಗೆ ಹಿಂದಿರುಗುವಾಗ ಸ್ಕೂಟರ್‌ನಲ್ಲಿ ಬಿದ್ದು ಗಾಯ ಮಾಡಿಕೊಂಡಿದ್ದಾಳೆ. ನೀವು ಅದರ ಬಗ್ಗೆ ಯಾವ ವಿಷಯವನ್ನು ನಿಮ್ಮ ಟಿ.ವಿ.ವಾಹಿನಿಗಳಲ್ಲಿ ಹೇಳುವುದಕ್ಕೆ ಹೋಗಬೇಡಿ' ಎಂದು ಆಸ್ಪತ್ರೆ ಒಳಕ್ಕೆ ಹೋಗಿಬಿಟ್ಟೆ.

(ಸಶೇಷ)